



ಅಗ್ನಿಶಿಲೆಗಳನ್ನು ಕತ್ತರಿಸಿ ಜೋಡಿಸಿರುವ ಈ ಮೆಟ್ಟಿಲುಗಳು, ಇದೊಂದು ಮಾನವ ನಿರ್ಮಿತ ಮೆಗಲಿತಿಕ್ ತಾಣವೆಂಬುದಕ್ಕೆ ಪುರಾವೆಯಾಗಿವೆ

## ಗುಡ್ಡದ ಒಡಲಾಳದಲ್ಲೊಂದು ಪಿರಮಿಡ್?

ಹಲವು ಜ್ಞಾನಶಾಖೆಗಳ ತಜ್ಞರು ಜೊತೆಗೂಡಿ ಕಂಡುಹಿಡಿದ ವಿಚಾರಗಳು ವಿವಾದಾತ್ಮಕವಾದವು. ಇಡೀ ಗುಡ್ಡವೇ ಮಾನವ ನಿರ್ಮಿತ ಪಿರಮಿಡ್ ಆಗಿರುವ ಸಾಧ್ಯತೆಯನ್ನು ನಟವಿಜಯ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಪ್ರಕಟಿಸಿದೊಡನೆ ವಾದ ವಿವಾದಗಳು ಭುಗಿಲೆದ್ದವು. 'ಈ ಗುಡ್ಡದ ಒಡಲಾಳದಲ್ಲಿ ಪರಸ್ಪರ ಜೋಡಿಸಲಾದ ಪೊಳ್ಳು ಭಾಗಗಳಿವೆ, ಅವು ಮಾನವ ನಿರ್ಮಿತ ಸಭಾಗೃಹಗಳಾಗಿರಬಹುದು ಎಂದು ಊಹಿಸಲು ಎಡೆಮಾಡಿಕೊಡುತ್ತವೆ' ಎಂದು ಅಕ್ಬರ್ ಅಲಿ ಮತ್ತು ನಟವಿಜಯ ತಿಳಿಸಿದ್ದರು. 'ಪೊಳ್ಳು ಭಾಗಗಳು ಜ್ವಾಲಾಮುಖಿಯೊಂದರಿಂದ ಸೃಷ್ಟಿಯಾದ ಸಹಜ ಗುಹೆಗಳೆ? ಇಲ್ಲ ಇವು ಮಾನವ ನಿರ್ಮಿತವೆ?' ಎಂಬುದೇ ಬಹು ದೊಡ್ಡ ಚರ್ಚೆಯ ವಿಷಯವಾಗಿದೆ. ತಾವು ನಡೆಸಿದ ಕಾರ್ಬನ್ ಡೇಟಿಂಗ್ ಪ್ರಕಾರ ಈ ರಚನೆ ಕ್ರಿ.ಪೂ 25000ದಿಂದ 14000ವರೆಗೆ ಕಟ್ಟಿರುವುದು ಎಂದು ನಟವಿಜಯ ಅವರು ಅಂದಾಜು ಮಾಡಿದರು. ಅಂದರೆ ಕಳೆದ ಹಿಮಯುಗದ ಕೊನೆಯಲ್ಲಿ ನಿರ್ಮಿಸಿದ ಪಿರಮಿಡ್ ಎಂಬ ಈ ಅಂದಾಜು, ಮತ್ತಷ್ಟು ತೀವ್ರ ಪ್ರತಿಕ್ರಿಯೆಗೆ ಕಾರಣವಾಯಿತು.

'ಕಳೆದ ಹಿಮಯುಗ ಮುಗಿದಾಗ, ಮನುಷ್ಯ ಬೇಟೆಯಾಡಿ ಆಹಾರ ಒಟ್ಟೈಸುತ್ತಿದ್ದ' ಎಂದು ಇಲ್ಲಿಯವರೆಗೂ ಭಾವಿಸಲಾಗಿದೆ. ಹೀಗಿರುವಾಗ, 27000 ವರ್ಷಗಳ ಹಿಂದೆ, ಇಲ್ಲೊಂದು ಮನುಷ್ಯ ನಿರ್ಮಿತ ಪಿರಮಿಡ್ ಇದೆ ಎಂದು ಅಕಡೆಮಿಕ್ ಜಗತ್ತು ಒಪ್ಪುವುದು ಅಸಾಧ್ಯವಿತ್ತು. ಹಾಗೇನಾದರೂ ಒಪ್ಪಿಕೊಂಡರೆ, ಇತಿಹಾಸಪೂರ್ವ ಸಮಯದ ಬಗ್ಗೆ ನಮಗೆ ಇಲ್ಲಿಯವರೆಗೂ ತಿಳಿದಿರುವ ಎಲ್ಲವೂ ತಲೆಕೆಳಗಾಗುತ್ತದೆ. ವಿಜ್ಞಾನ ತಂತ್ರಜ್ಞಾನ, ಎಂಜಿನಿಯರಿಂಗ್ ಕೌಶಲವಿದ್ದ ಪುರಾತನ ನಾಗರಿಕತೆಯೊಂದು ಅಷ್ಟು ಸಾವಿರ ವರ್ಷಗಳ ಹಿಂದೆ, ಇಲ್ಲಿ ಇಂಡೊನೇಷಿಯಾದಲ್ಲಿ ಇದ್ದಿರಬಹುದು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಅನೇಕ ತಜ್ಞರು, ಸಂಶೋಧಕರು, ನಟವಿಜಯ ಅವರ ತೀರ್ಮಾನಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಪ್ರಮಾಣಿತ ಪುರಾತತ್ತ್ವಶಾಸ್ತ್ರದ ವಿಧಾನಗಳನ್ನು ಬಳಸಿಲ್ಲ ಎಂದಿದ್ದಾರೆ. ಸರಕಾರ ಇಷ್ಟೊಂದು ಹಣ ಹಾಕಿರುವುದು ರಾಷ್ಟ್ರೀಯವಾದದ ಉದ್ದೇಶದಿಂದ ಇರಬಹುದೆ ಎಂಬ ಗುಮಾನಿಯೂ ವ್ಯಕ್ತವಾಗಿದೆ.

'ಈ ಗುಡ್ಡ ಮಾನವ ನಿರ್ಮಿತ ಪಿರಮಿಡ್ ಏಕಾಗಬಾರದು? ಜಗತ್ತಿನ ಅನೇಕ ಮುಂದುವರೆದ ನಾಗರಿಕತೆಗಳ ಜೊತೆ ಈಗಲೂ ಬೇಟೆಯಾಡಿ ಬದುಕುವ ಜನಾಂಗಗಳೂ ಭೂಮಿಯ ಮೇಲಿವೆ' ಎಂದು ವಾದಿಸುವವರೂ ಇದ್ದಾರೆ. ತೀವ್ರ ವಿವಾದಕ್ಕೆ ಸಿಕ್ಕಿಬಿದ್ದಿದೆ ಗುನುಂಗ್ ಪದಾಂಗ್.

ನಾವಿಲ್ಲಿ ನಿಂತ ಇದೇ ಸಮಯದಲ್ಲಿ ವಿಶ್ವದ ಅಕಡೆಮಿಕ್ ಜಗತ್ತಿನಲ್ಲಿ ಅತ್ಯಾಸಕ್ತಿಯ ತೀಕ್ಷ್ಣ ಚರ್ಚೆ ಆರಂಭವಾಗಿತ್ತು. ಈಗಷ್ಟೆ ಕೆಲವೇ ದಿನಗಳ ಹಿಂದೆ, 29 ಫೆಬ್ರುವರಿ 2024ರ 'ಡಿಸ್ಕವರ್' ವಿಜ್ಞಾನ ಪತ್ರಿಕೆ 'ಗುನುಂಗ್ ಪದಾಂಗ್ ಜಗತ್ತಿನ ಅತ್ಯಂತ ಪುರಾತನ ಪಿರಮಿಡ್ ಏನು?' ಎಂಬ ದೀರ್ಘ ಲೇಖನವನ್ನು ಪ್ರಕಟಿಸಿತ್ತು.

'ಮುಖ್ಯವಾಹಿನಿಯ ಪುರಾತತ್ತ್ವಶಾಸ್ತ್ರಜ್ಞರು ಈ ತಜ್ಞರ ಗುಂಪು ತಲುಪಿರುವ ತೀರ್ಮಾನದ ಬಗ್ಗೆ ಸಂದೇಹದಲ್ಲಿದ್ದಾರೆ. ಕೆಲವರು ಈ ಅಧ್ಯಯನದ ಕೇಂದ್ರದಲ್ಲಿರುವ ಖಗೋಳಶಾಸ್ತ್ರಜ್ಞನನ್ನೇ ಅವಿಶ್ವಾಸದಿಂದ ಅವಮಾನಿಸಲು ಪ್ರಯತ್ನಿಸಿದ್ದಾರೆ. ಆ ಖಗೋಳಶಾಸ್ತ್ರಜ್ಞ ಅಮೆರಿಕದ ಕ್ಯಾಲ್‌ಟೆಕ್‌ನಲ್ಲಿ ಪಿಎಚ್.ಡಿ ಪದವಿ ಪಡೆದ ಸಂಶೋಧಕ ಡ್ಯಾನಿ ಹಿಲ್ಮನ್ ನಟವಿಜಯ, ಈತ ತನ್ನ ಬಹುಪಾಲು ಬದುಕನ್ನು 'ಗುನುಂಗ್ ಪದಾಂಗ್'ನ ಅದ್ಭುತ ಸ್ಥಳದ ಅಧ್ಯಯನದಲ್ಲಿ ಕಳೆದಿದ್ದಾರೆ' ಎಂದು ತಿಳಿಸುತ್ತಾ 'ನಟವಿಜಯ ಈ ತಾಣ ಆರ್ಕಿಯಾಲಜಿಕಲ್ ವಂಡರ್, 27000 ವರ್ಷಗಳ ಹಿಂದಿನವರೆಗೂ ಪ್ರವರ್ಧಮಾನದಲ್ಲಿದ್ದ ಒಂದು ಮುಂದುವರೆದ ನಾಗರಿಕತೆಯ ತೊಟ್ಟಿಲು ಎಂದೇಕೆ ನಂಬುತ್ತಾರೆ' ಎಂಬುದನ್ನು 'ಡಿಸ್‌ಕವರ್' ಪತ್ರಿಕೆ ತಿಳಿಸಿತ್ತು. ಇತ್ತೀಚಿನ ಸಂಶೋಧನೆ, ಅವುಗಳಿಗೆ ಬಂದ ಪ್ರತಿಕ್ರಿಯೆ ಎಲ್ಲವನ್ನೂ ಕೂಡಿಸಿ ವಿಶ್ಲೇಷಣಾತ್ಮಕ ಚರ್ಚೆಯನ್ನು ಮುಂದಿಟ್ಟಿತ್ತು.

ಈ ಎಲ್ಲ ವಾದ ವಿವಾದಗಳ ಶಮನಕ್ಕೆ ಇರುವ ಒಂದೇ ಉತ್ತರ, ವಿಜ್ಞಾನ ಮತ್ತು ಸಂಶೋಧನೆ. ಈಗಷ್ಟೇ ಜಗತ್ತು ಎಚ್ಚೆತ್ತಿದೆ, ಗುನುಂಗ್ ಪದಾಂಗ್‌ನ ಕೌತುಕಕ್ಕೆ. ಮುಂದಿನ ವರ್ಷಗಳಲ್ಲಿ ಅಂತರರಾಷ್ಟ್ರೀಯ ಅಂತರಶಿಸ್ತೀಯ ಸಂಶೋಧನಾ ತಂಡಗಳು ಅಧ್ಯಯನಕ್ಕೆ ಇಳಿದು, ಹೊರಹಾಕುವ ಸತ್ಯಗಳಿಗೆ ನಾವು ಕಾಯಬೇಕಿದೆ.

ಕಾರಿನಲ್ಲಿ ಕುಳಿತೆವು. ಹೊರಟಂತೆ, ಕಡೆಯ ಬಾರಿಗೆ ಹಿಂತಿರುಗಿ ನೋಡಿದೆವು. ಕತ್ತಲ ನಿಶ್ಶಬ್ದ ರಾತ್ರಿಯಲ್ಲಿ ಅಗ್ನಿಶಿಲೆಗಳನ್ನು ಒಡಲಲ್ಲಿ ತುಂಬಿಕೊಂಡು, ಮುಡಿಯಲ್ಲಿ ಮುಡಿದುಕೊಂಡ ಗುನುಂಗ್ ಪದಾಂಗ್, ನಿಗೂಢ ರಹಸ್ಯಗಳ ಮುಸುಕು ಹೊದ್ದು ಶಾಂತವಾಗಿ ಮಲಗಿತ್ತು.

ಪ್ರತಿಕ್ರಿಯಿಸಿ: feedback@sudha.co.in